ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ ಎಡಿಎಂಐಇಎಸ್ ಟಿ(17)/06/2024/1367

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು - 560001,
ದಿನಾಂಕ: 12-11-2024.

**ಸುತ್ತೋಲೆ**

ವಿಷಯ : ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿನ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ:ಇಡಿ/86/ಡಿಟಿಇ/2023,ದಿನಾಂಕ :07.10.2023

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರದಲ್ಲಿ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಬಗ್ಗೆ ಪ್ರತ್ಯೇಕ ಸ್ಕ್ರೀನಿಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ಪ್ರತ್ಯಾಯೋಜಿಸಿ ಅರ್ಹ ಅಧ್ಯಾಪಕ ವರ್ಗದವರಿಗೆ ಪದೋನ್ನತಿ ನೀಡುವ ಕುರಿತು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ಅಧಿನಿಯಮ 2019 ಮತ್ತು 2020 ರ ಸ್ಪಷ್ಟೀಕರಣ/ಸುತ್ತೋಲೆ ಹಾಗೂ ಎಐಸಿಟಿಇ ರವರು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳನ್ವಯ **ಪದೋನ್ನತಿ ಪಡೆಯಲು ಅರ್ಹರಿರುವ** ಎಲ್ಲಾ ಅಧ್ಯಾಪಕ ವರ್ಗದವರಿಂದ ಪ್ರಾಂಶುಪಾಲರುಗಳು ಪ್ರಸ್ತಾವನೆಗಳನ್ನು ಪಡೆದು ನಿಯಮಾನುಸಾರ ಪ್ರಾಥಮಿಕ ಹಂತದ ಪರಿಶೀಲನೆ ಮಾಡಿ ಈ ಪತ್ರದೊಂದಿಗೆ ಲಗತ್ತಿಸಿರುವ **ನಮೂನೆಯನ್ನು ಭರ್ತಿ ಮಾಡಿ** ದಿನಾಂಕ:**16.11.2024** ರೊಳಗೆ ಸಿದ್ಧಪಡಿಸಿಕೊಂಡು ದೃಢೀಕರಣದೊಂದಿಗೆ **estdte17@gmail.com** ಗೆ ಸಲ್ಲಿಸಲು ಸೂಚಿಸಲಾಗಿದೆ. ತದನಂತರ ಸ್ಕ್ರೀನಿಕರಣ ಸಮಿತಿ (Screening Committee/Evaluation/Selection Committee) ಮುಂದೆ ಆಯುಕ್ತಾಲಯವು ಸೂಚಿಸುವ ದಿನಾಂಕದಂದು ಸಂಬಂಧಿತ ವಿಭಾಗಾಧಿಕಾರಿಗಳೊಂದಿಗೆ ಪ್ರಾಂಶುಪಾಲರು ಪ್ರಸ್ತಾವನೆಗಳೊಂದಿಗೆ ಹಾಜರಾಗುವಂತೆ ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ

ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ

ಪ್ರತಿ

1. ಆಯುಕ್ತರವರ ಆಪ್ತಶಾಖೆ ಮಾಹಿತಿಗಾಗಿ
2. ನಿರ್ದೇಶಕರವರ ಆಪ್ತಶಾಖೆ ಮಾಹಿತಿಗಾಗಿ
3. ಜಂಟಿ ನಿರ್ದೇಶಕರ (ಆಡಳಿತ) ಆಪ್ತಶಾಖೆ ಮಾಹಿತಿಗಾಗಿ
4. ಜಂಟಿ ನಿರ್ದೇಶಕರ (ಪರೀಕ್ಷೆ)/(ಸಿಡಿಸಿ) ಇವರ ಆಪ್ತಶಾಖೆ ಮಾಹಿತಿಗಾಗಿ
5. ಸಂಯೋಜಕರು ಈ ಆಡಳಿತ ವಿಭಾಗ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
6. ಕಛೇರಿ ಪ್ರತಿ.

# ನಮೂನೆ

| ಕ್ರಮ ಸಂಖ್ಯೆ | ಹೆಸರು | ಪದನಾಮ | ವಿಭಾಗ | ಪದೋನ್ನತಿ ಹಂತ (L11/12/13A1/14) | ಅರ್ಹತಾ ದಿನಾಂಕ | ಷರಾ |
|---|---|---|---|---|---|---|
| | | | | | | |
| | | | | | | |
| | | | | | | |

ಪ್ರಾಚಾರ್ಯರು